ವೈದ್ಯಕೀಯ ಶಿಕ್ಷಣಕ್ಕಾಗಿ ಗ್ಲಾಸ್ಗೋದಿಂದ ಎಡಿನ್‌ಬರೊಗೆ ಹೋಗಿದ್ದ. ಅಪ್ಪನಿಗೆ ನನ್ನ ಭವಿಷ್ಯದ ಚಿಂತೆಯಿತ್ತು. ಅವರ ಒತ್ತಾಯದ ಮೇರೆಗೆ ಹಿಸ್ಟ್ರಿ ಮತ್ತು ಜಿಯೊಗ್ರಫಿಯಲ್ಲಿ ಬಿ.ಎ. ಪಾಸು ಮಾಡಿದೆ. ನಂತರ ಟೀಚರ್ ಟ್ರೈನಿಂಗ್ ಕೋರ್ಸ್ ಮಾಡಿ ಶಾಲೆಯಲ್ಲಿ ಅಧ್ಯಾಪಕನಾದೆ. ರಾಬರ್ಟ್ ಈ ಹಿಂದೆ ವಾಸಿಸುತ್ತಿದ್ದ ಮನೆಯಲ್ಲಿಯೇ ಇದ್ದ. ಅವನ ಚಿಕ್ಕ ಮತ್ತು ಹಳದಿ ಬಣ್ಣದ ಮನೆ ಕ್ಲೈಡ್ ನದಿಯ ತೀರದಲ್ಲಿತ್ತು. ಅವನ ಹೆಂಡತಿ ಅವನನ್ನು ವಿವಾಹವಾಗಿ ಅದೇ ಮನೆಗೆ ಬಂದಿದ್ದಳು, ಅದೇ ಮನೆಯಲ್ಲಿ ಅವನ ಇಬ್ಬರು ಮಕ್ಕಳ ಪಾಲನೆ ಪೋಷಣೆಯಾಯಿತು. ಅವನ ಪರಿಸ್ಥಿತಿ ಮತ್ತು ಜೀವನಮಟ್ಟದಲ್ಲಿ ಯಾವುದೇ ವ್ಯತ್ಯಾಸ ಬಂದಿರಲಿಲ್ಲ. ಜಗತ್ತು ಎಲ್ಲಿಗೋ ಹೋಗಿತ್ತು, ಆದರೆ ಫಕೀರ ರಾಬರ್ಟ್ ಎಲ್ಲಿದ್ದನೋ ಅಲ್ಲಿಯೇ ಇದ್ದ; ಅದೇ ರಾಬರ್ಟ್ ಆಗಿದ್ದ. ತನ್ನ ಮನೆಯ ಸೂಕ್ತ ದುರಸ್ತಿಯನ್ನು ಸಹ ಮಾಡಿಸದಾಗಿದ್ದ.

ಅವನ ನೃತ್ಯದ ಶಾಲೆ ಕೆಲವು ವರ್ಷ ಚೆನ್ನಾಗಿಯೇ ನಡೆದಿತ್ತು. ಒಂದು ಕಾಲದಲ್ಲಿ ಅವನ ಡ್ಯಾನ್ಸ್ ಕ್ಲಬ್‌ನಲ್ಲಿ ಎಂಟರಿಂದ ಹದಿನೆಂಟು ವರ್ಷದ ಇನ್ನೂರು ವಿದ್ಯಾರ್ಥಿಗಳಿರುತ್ತಿದ್ದರು. ಆದರೆ ಅವನು ವಿಶೇಷ ಪ್ರಸಿದ್ಧಿಯನ್ನು ಪಡೆಯದಾದ. ಅವನ ತರಬೇತಿ ಶಾಲೆ ಖಾಸಗಿ ಮಟ್ಟದಲ್ಲಿಯೇ ಇತ್ತು. ತದನಂತರದಲ್ಲಿ ತಡಬಡಿಸಿ ಮುಚ್ಚಿತು. ಅವನ ತಂದೆ ಸಹ ಸ್ವರ್ಗಸ್ಥರಾದರು. ಅವನ ಹೆಂಡತಿ ನೌಕರಿ ಮಾಡಿ, ಪರಿವಾರಕ್ಕೆ ಆರ್ಥಿಕ ಸಹಕಾರ ನೀಡಿ ತನ್ನಿಬ್ಬರು ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿ ಮಾಡಿದಳು.

ನಾನು ಅವನ ಮನೆಗೆ ಹೋದಾಗ ಅವನು ಒಂಟಿಯಾಗಿದ್ದ. ಕಾಫಿಯ ಘಮಘಮ ವಾಸನೆ ನನ್ನ ಮೂಗಿನ ಹೊಳ್ಳೆಗಳೊಳಗೆ ನುಗ್ಗಿತು. ನಾನು ಬರುತ್ತಿರುವ ಬಗ್ಗೆ ಫೋನಿನಲ್ಲಿ ತಿಳಿಸಿದ್ದೆ, ಹೀಗಾಗಿ ಅವನು ನನಗಾಗಿ ಕಾಫಿ ತಯಾರಿಸುತ್ತಿದ್ದ. ಅವನ ಹೆಂಡತಿ ಪರ್ಥ್‌ನಲ್ಲಿದ್ದ ತನ್ನ ಮಗಳ ಮನೆಗೆ ಹೋಗಿದ್ದಳು; ಅಲ್ಲಿ ಅವಳು ಪೊಲೀಸ್ ನೌಕರಿಯಲ್ಲಿದ್ದಳು. ಅವಳ ಮಗ ಮಾರ್ಕೆಟಿಂಗ್‌ನಲ್ಲಿದ್ದ, ಅವನು ಒಂದು ನಗರದಿಂದ ಇನ್ನೊಂದು ನಗರಕ್ಕೆ ಓಡಾಡುತ್ತಿದ್ದ. ನನ್ನನ್ನು ನೋಡಿ ರಾಬರ್ಟ್‌ನ ಕಣ್ಣುಗಳು ಹೊಳೆದವು. ನಾನು ಅವನಿಗಾಗಿ ಗ್ಲಾಸ್ಗೋ ಸೆಂಟರ್‌ನಲ್ಲಿದ್ದ ಪ್ರಸಿದ್ಧ ಬೇಕರಿಯಿಂದ ಕೇಕ್ ಖರೀದಿಸಿ ತಂದಿದ್ದೆ. ಅವನು ಕೇಕ್ ತೆಗೆದುಕೊಂಡು ಕೃತಜ್ಞತೆಯನ್ನು ಹೇಳಿದ.

'ಗ್ಲಾಸ್ಗೋಗೆ ಯಾವಾಗ ಬಂದೆ?' ಅವನು ನನ್ನನ್ನು ತಬ್ಬಿಕೊಂಡ.

'ಮೊನ್ನೆ ಬಂದೆ.'

ರಾಬರ್ಟ್‌ನನ್ನು ಭೇಟಿಯಾದಾಗಲೆಲ್ಲಾ ನನಗೆ ಹಿತವೆನಿಸುತ್ತಿತ್ತು. ಅವನ ಸ್ಟಾರ್ಟಾ ಕ್ಲಬ್‌ನಿಂದ ಅವನ ಆದಾಯ ಹೆಚ್ಚಿರಲಿಲ್ಲ. ನೃತ್ಯ ಕಲಿತ ನಾವ್ಯಾರೂ ನೃತ್ಯಕಲೆಯನ್ನು ಮೇಲ್ಮಟ್ಟಕ್ಕೆ ಒಯ್ದಿರಲಿಲ್ಲ. ಆದರೂ ಅವನ ಸಾನ್ನಿಧ್ಯದಲ್ಲಿ ಕೆಲವು ಕ್ಷಣಗಳನ್ನು ಕಳೆಯುವುದರಿಂದ ಮನಸ್ಸಿಗೆ ಶಾಂತಿ ಲಭಿಸುತ್ತಿತ್ತು. ಅವನು ನನ್ನ ಬಾಲ್ಯದ ಮತ್ತು ಕಿಶೋರಾವಸ್ಥೆಯ ಪ್ರತಿಬಿಂಬವಾಗಿದ್ದ. ಕಾಲ ನಮ್ಮಿಬ್ಬರ ನಡುವಿನ ಹನ್ನೆರಡು ವರ್ಷಗಳ ಅಂತರವನ್ನು ಕಡಿಮೆಗೊಳಿಸಿತ್ತು. ಈಗ ಅವನು ನನಗೆ ಗುರುವಾಗಿ ಕಾಣಿಸಿಕೊಳ್ಳದೆ, ಒಬ್ಬ ಗೆಳೆಯನಂತೆ ಭೇಟಿಯಾಗುತ್ತಿದ್ದ.

ಅವನು ತನ್ನ ಮಕ್ಕಳ ಯಶಸ್ಸಿನ ಬಗ್ಗೆಯೇ ಚರ್ಚಿಸುತ್ತಿದ್ದ. ಅವನ ಬಳಿ ಹೇಳಿಕೊಳ್ಳಲು ಈ ವಿಷಯ ಮಾತ್ರವಿತ್ತು. ನನ್ನ ಜೀವನದ ಬಗ್ಗೆ ಸಹ ಕೇಳಿದ. ನಾನು ಸ್ಕಾಟ್ಲೆಂಡಿನಲ್ಲಿ ಒಬ್ಬ ಮಹಿಳೆಯಿಂದಾಗಿ ಎಲ್ಲವನ್ನೂ ತ್ಯಜಿಸಿ ಡೆನ್ಮಾರ್ಕ್‌ಗೆ ಹೋದದ್ದು, ಅವಳೊಂದಿಗೂ ನನಗೆ ಹೊಂದಾಣಿಕೆಯಾಗದಿದ್ದನ್ನು ಕೇಳಿ ತುಂಬಾ ವಿಷಾದವನ್ನು ವ್ಯಕ್ತಪಡಿಸಿದ. ಈ ವಿಷಯದಲ್ಲಿ ರಾಬರ್ಟ್ ಅದೃಷ್ಟವಂತನಾಗಿದ್ದ, ಅವನ ಪರಿವಾರ ಇನ್ನೂ ಈ ಹಿಂದಿನಂತೆಯೇ ಸಂತಸದಿಂದಿತ್ತು. ಅವನ ಹೆಂಡತಿ ಅವನ ಕಷ್ಟಸುಖದಲ್ಲಿ ಸಹಕರಿಸುತ್ತಿದ್ದು, ಅವನೊಂದಿಗೆ ಈಗಲೂ ಇದ್ದಳು. ಇಬ್ಬರು ಮಕ್ಕಳೇ ಅವನ ಠೇವಣಿಯಾಗಿದ್ದರು. ಅವನು ಬಡವನಾಗಿದ್ದು, ಹಣದ ವಿಷಯದಲ್ಲಿ ಫಕೀರನಾಗಿದ್ದಾಗ್ಯೂ, ಅನೇಕ ವಿಷಯಗಳಲ್ಲಿ ಅವನು ನನಗಿಂತ ಹೆಚ್ಚು ಶ್ರೀಮಂತನಾಗಿದ್ದ.

ನಾನು ರಾಬರ್ಟ್‌ನ ಜೀವನದ ಬಗ್ಗೆ ಯೋಚಿಸುತ್ತಿದ್ದೆ, ಅವನು ನನ್ನ ಜೀವನದ ಬಗ್ಗೆ ಯೋಚಿಸುತ್ತಿದ್ದ. ರಾಬರ್ಟ್ ಹೇಳಿದ,

'ಗೆಳೆಯ... ನಿನ್ನ ಬಳಿ ತಾಯಿಯಿದ್ದಳು, ಜೊತೆಗೆ ಪ್ರಭಾವಶಾಲಿ ತಂದೆಯಿದ್ದರು; ಇಬ್ಬರೂ ನಿನಗೆ ಸರಿಯಾದ ಮಾರ್ಗವನ್ನು ತೋರಿಸಿದ್ದಾರೆ. ನನ್ನ ಬಳಿ ತಾಯಿಯಿರಲಿಲ್ಲ, ನನ್ನ ತಂದೆ ನನ್ನೊಂದಿಗೆ ನೃತ್ಯ ಮಾಡಲು ಆರಂಭಿಸುತ್ತಿದ್ದರು.'

ರಾಬರ್ಟ್ ತನ್ನ ಹದಿನೈದನೆಯ ವಯಸ್ಸಿನಲ್ಲಿ ತನ್ನ ತಾಯಿಯನ್ನು ಕಳೆದುಕೊಂಡಿದ್ದ. ತಾಯಿಯಿಂದ ವಂಚಿತನಾದ ಮಗನನ್ನು ಅವನ ತಂದೆ ಮುದ್ದಿನಿಂದ ಸಾಕಿದ್ದರು. ಅವರು ರಾಬರ್ಟ್‌ನನ್ನು ಯಾವುದಕ್ಕೂ ತಡೆಯುತ್ತಿರಲಿಲ್ಲ. ಅವನ ಎಲ್ಲಾ ಕೆಲಸಗಳಿಗೆ ತಮ್ಮ ಸಂಪೂರ್ಣ ಸಹಕಾರವನ್ನು ಕೊಡುತ್ತಿದ್ದರು.

'ಒಂದು ವೇಳೆ ನನ್ನ ತಂದೆ ನನ್ನನ್ನು ಡ್ಯಾನ್ಸ್ ಕ್ಲಬ್ ನಡೆಸಲು ತಡೆದಿದ್ದರೆ ಹಾಗೂ ಬೇರೆಯದನ್ನು ಮಾಡಲು ಒತ್ತಾಯಗೊಳಿಸಿದ್ದರೆ...' ರಾಬರ್ಟ್ ವಿಷಾದದಿಂದ ಹೇಳಿದ.

ತನ್ನ ಡ್ಯಾನ್ಸ್ ಕ್ಲಬ್ ತನ್ನ ಅಸಫಲತೆಗೆ ಕಾರಣ ಎಂದು ರಾಬರ್ಟ್ ತಿಳಿಯುತ್ತಾನೆಂದು ಯೋಚಿಸಿ ನನಗೆ ತುಂಬಾ ದುಃಖವಾಯಿತು.

'ರಾಬರ್ಟ್, ದಯವಿಟ್ಟು ಹೀಗೆ ಹೇಳಬೇಡ. ನನ್ನ ಹಿಂದಿನ ಜೀವನದ ಬಗ್ಗೆ ಯೋಚಿಸಿದಾಗ ನಿನ್ನ ಡ್ಯಾನ್ಸ್ ಕ್ಲಬ್ ನೆನಪಾಗುತ್ತದೆ, ಅಲ್ಲಿ ನಾನು ನೃತ್ಯ ಅಭ್ಯಾಸ ಮಾಡುತ್ತಿದ್ದೆ, ಅನೇಕ ಸಣ್ಣ ದೊಡ್ಡ ವೇದಿಕೆಗಳಲ್ಲಿ ನೃತ್ಯ ಪ್ರಸ್ತುತಪಡಿಸುತ್ತಿದ್ದೆ, ಅವೆಲ್ಲವೂ ನನ್ನ ಜೀವನದ ಸ್ವರ್ಗಸದೃಶ ಸಂತೋಷದ ಕ್ಷಣಗಳಾಗಿದ್ದವು' ಎಂದೆ.

ರಾಬರ್ಟ್ ನನ್ನ ಹೆಗಲನ್ನು ಮೆಲ್ಲನೆ ತಟ್ಟಿದ. ಅವನ ಕಣ್ಣುಗಳು ತುಂಬಿ ಬಂದವು. ಅವನು ಒತ್ತಿ ಬಂದ ಕಂಠದಿಂದ ಹೇಳಿದ, 'ನೀವೆಲ್ಲಾ ಈಗಲೂ ನನ್ನನ್ನು ಗೌರವಿಸುತ್ತೀರ ಎಂಬುದನ್ನು ನೋಡಿ ನನಗೆ ಸಂತೋಷವಾಯಿತು. ನನ್ನ ಡ್ಯಾನ್ಸ್ ಶಾಲೆ ನಿರರ್ಥಕವಾಗಲಿಲ್ಲ.'

'ಖಂಡಿತ ನಿರರ್ಥಕವಾಗಲಿಲ್ಲ. ನನ್ನೊಂದಿಗೆ ಅಡ್ಡಾಡಲು ಒಮ್ಮೆ ಕೋಪನ್‌ಹೇಗನ್‌ಗೆ ಬಾ. ನಿನ್ನನ್ನು ಸ್ಕ್ಯಾಂಡಿನೇವಿಯನ್ ದೇಶಗಳಿಗೆ ಕರೆದುಕೊಂಡು ಹೋಗುತ್ತೇನೆ.'

ರಾಬರ್ಟ್ ಸಂತಸದಿಂದ ಹೇಳಿದ, 'ಬರ್ತೀನಿ, ಖಂಡಿತ ಬರ್ತೀನಿ. ನಿಮ್ಮನ್ನು ಬಿಟ್ಟರೆ ನನಗ್ಯಾರಿದ್ದಾರೆ?'

ನಾನು ರಾಬರ್ಟ್‌ನೊಂದಿಗೆ ಸಿಟಿ ಸೆಂಟರ್‌ನಲ್ಲಿ ಅಡ್ಡಾಡಿದೆ. ನನ್ನ ಬಾಲ್ಯದ ಜಗತ್ತು... ಈ ಸೆಂಟರ್‌ನಿಂದ ಹಾದು ನನ್ನ ಯೂನಿವರ್ಸಿಟಿಗೆ ಹೋಗುತ್ತಿದ್ದೆ. ಜಾರ್ಜ್ ಸ್ಕ್ವೇರ್‌ನಲ್ಲಿ ರೆಸ್ಟೋರೆಂಟ್ ಮತ್ತು ಕೆಫೆಯ ಒಂದು ಅದ್ಭುತ ಸಂಗಮವಿದೆ. ಸ್ನೇಹಿತರನ್ನು ಭೇಟಿಯಾಗಲು ಈ ಸ್ಥಳವಿತ್ತು. ನಾನಿಲ್ಲಿ ನಿಂತು ಅನೇಕ ಹುಡುಗಿಯರಿಗೆ ಶಿಳ್ಳೆ ಹೊಡೆದಿದ್ದೆ. ಇಲ್ಲಿ ನನ್ನ ಹಳೆಯ ಮತ್ತು ಬಾಲ್ಯದ ಸ್ನೇಹಿತರನ್ನು ಭೇಟಿಯಾದೆ.

ನಾಲ್ಕು ದಿನಗಳ ನಂತರ ಅಮ್ಮನಿಂದ ಬೀಳ್ಕೊಂಡು ಹೋದೆ. ಈಗ ಮರಳಿ ಪಯಣ...

ಕೋಪನ್‌ಹೇಗನ್‌ನಲ್ಲಿರುವುದು ನನಗಿಷ್ಟವಿಲ್ಲ ಎಂದಲ್ಲ. ಕೋಪನ್‌ಹೇಗನ್ ಒಂದು ಸುಂದರ ಮತ್ತು ವ್ಯವಸ್ಥಿತ ನಗರ. ಅಲ್ಲಿ ನನ್ನ ಶಾಲೆಯ ಮತ್ತು ನನ್ನ ಸ್ಕಾಟಿಷ್ ಡ್ಯಾನ್ಸ್ ಕ್ಲಬ್ ಹಾಗೂ ಕೆಲವು ಮುಖ್ಯ ಮಿತ್ರರಿದ್ದರು. ನ್ಯೂಜಿಲೆಂಡಿನ ನನ್ನ ಸಂಗಾತಿ ಎಂದ್ರಿಯಾಜ್, ಮೆಕ್ಸಿಕೋದ ಲಾರಾ ಮತ್ತು ಇಂಡಿಯಾದ ಅರ್ಚನಾಳೊಂದಿಗೆ ನನಗೆ ಉತ್ತಮ ಗೆಳೆತನವಿತ್ತು. ನಾನೊಂದು ಇಂಟರ್‌ನ್ಯಾಷನಲ್ ಚರ್ಚ್‌ನೊಂದಿಗೆ ಕಲೆತಿದ್ದೆ. ಆದರೆ ನಾನು ನನ್ನ ಮೂಲ ದೇಶ ಸ್ಕಾಟ್ಲೆಂಡಿಗೆ ಬಂದಾಗ, ಡೆನ್ಮಾರ್ಕ್‌ಗೆ ಮರಳಿ ಹೋಗಲು ಮನಸ್ಸಾಗುತ್ತಿರಲಿಲ್ಲ. ಕಾಲುಗಳು ಮುಂದಕ್ಕೆ ಹೋಗುತ್ತಿರಲಿಲ್ಲ. ನೀನಾಳಿಂದ ವಿಚ್ಛೇದನವಾದ ನಂತರ ಅಲ್ಲಿರುವ ಉದ್ದೇಶವೇ ಕೊನೆಗೊಂಡಿತ್ತು. ಆದರೆ ಜೀವನೋಪಾಯದ ಪ್ರಶ್ನೆ ಎದುರಿಗಿತ್ತು... ಹೊಟ್ಟೆಗೇನು ಮಾಡುವುದು? ಹೀಗಾಗಿ ಭಾರವಾದ ಮನಸ್ಸಿನಿಂದ ಡೆನ್ಮಾರ್ಕ್‌ಗೆ ಹೋಗುವ ವಿಮಾನ ಹಿಡಿದೆ.

ವಿಮಾನದಲ್ಲಿ ಹತ್ತಿದ್ದೆ, ಆಗಲೇ ಮೊಬೈಲ್ ರಿಂಗಾಯಿತು.

'ಪಪ್ಪಾ' ಲೂಸಿಯ ಧ್ವನಿ.

'ಹೇಳಮ್ಮ!'

'ಪಪ್ಪಾ, ನಾವು ಕೋರ್ಟ್‌ಗೆ ಹೋಗಿ ನಮ್ಮ ಸರನೇಮ್ ಬದಲಿಸಿಕೊಂಡೆವು, ವಾಲ್ಬರ್ ತೆಗೆದು ಸ್ಕಾಟ್ ಎಂದಿಟ್ಟುಕೊಂಡಿದ್ದೇವೆ. ಈಗ ನಿಮಗೆ ಸಂತೋಷವಾಯಿತೇ?' ಅವಳ ಧ್ವನಿಯಲ್ಲಿ ಆವೇಶವಿತ್ತು. ನನ್ನಿಂದ ಮಾತನಾಡಲು ಸಾಧ್ಯವಾಗದೆ ಮೌನ ವಹಿಸಿದೆ.

'ಡ್ಯಾಡ್, ನಾವು ನಿನ್ನ ಮಕ್ಕಳೇ. ವಿ ಲವ್ ಯೂ!'

'ಐ ಲವ್ ಯೂ ಲೂಸಿ' ಎಂದು ಹೇಳಲು ಬಯಸುತ್ತಿದ್ದೆ, ಆದರೆ ಮೊಬೈಲ್ ಕಟ್